OS 14/2021
PW -1

**ಸಾಕ್ಷಿಯನ್ನು ದಿನಾಂಕ 28-01-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ KBA  ವಕೀಲರಿಂದಃ**

**1.** ದಾವಾ ಸ್ವತ್ತಿಗೆ ಪ್ರತಿವಾದಿಗಳು ತೊಂದರೆ ನೀಡಿದ ಕಾರಣ ಅವರ ವಿರುದ್ಧ ಈ ದಾವೆಯನ್ನು ದಾವಾ ಆಸ್ತಿಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತೇನೆ.  ದಾವಾ ಆಸ್ತಿಯನ್ನು ನನಗೆ ಮಾರಾಟ ಮಾಡಿದ ರಾಮಯ್ಯರವರು ನನ್ನ ಸಂಬಂಧಿಕರು ಎಂದರೆ ಸರಿ.  **1968** ರ ವಿಭಾಗ ಪತ್ರದ ಪ್ರಕಾರ ದಾವಾ ಆಸ್ತಿಯ ಖಾತೆ ರಾಮಯ್ಯರವರ ಹೆಸರಿಗೆ ಬಂದಿರುತ್ತದೆ.  ರಾಮಯ್ಯರವರಿಗೆ ರಾಮಾನಂಜಪ್ಪ , ಶಂಕರಪ್ಪ, ಲಕ್ಷ್ಮಯ್ಯ ಸಹೋದರರು.  **1968** ರ ವಿಭಾಗ ಪತ್ರದ ಪ್ರಕಾರ ತಲಾ **2** ಎಕರೆ **28** ಗುಂಟೆಯಂತೆ ರಾಮಯ್ಯ ಮತ್ತು ಅವರ ಸಹೋದರರ ಭಾಗಕ್ಕೆ ಜಮೀನು ಬಂದಿರುತ್ತದೆ. ರಾಮಯ್ಯರವರ ಹಿಸ್ಸೆಗೆ ಬಂದ **2** ಎಕರೆ **28** ಗುಂಟೆ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ. ರಾಮಾಂಜನಪ್ಪರವರ ಭಾಗಕ್ಕೆ ಬಂದ **2** ಎಕರೆ **28** ಗುಂಟೆ ಜಮೀನಿನಲ್ಲಿ ಅವರೇ ಸ್ವಾಧೀನದಲ್ಲಿದ್ದರು ಎಂದರೆ ಸರಿ.  ಲಕ್ಷ್ಮಯ್ಯರವರ ಭಾಗಕ್ಕೆ ಬಂದ **1** ಎಕರೆ **38** ಗುಂಟೆ ಚಕ್ಕುಬಂದಿ ಒಳಗಿನ ಜಮೀನಿನಲ್ಲಿ ಅವರೇ ಸ್ವಾಧೀನದಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ.

**2.** ನಿಪಿ-**4** ರ ಪ್ರಕಾರ ರಾಮಯ್ಯನ ಭಾಗಕ್ಕೆ **2** ಎಕರೆ **27** ಗುಂಟೆ ಬಂದಿರುತ್ತದೆ ಎಂದರೆ ಸರಿ, ಒಂದು ಕಡೆ **2** ಎಕರೆ **1** ಗುಂಟೆ ಮತ್ತೊಂದು ಕಡೆ **19** ಗುಂಟೆ ಬಂದಿರುತ್ತದೆ.  **1968** ರ ವಿಭಾಗ ಪತ್ರದಲ್ಲಿ ರಾಮಯ್ಯರವರ ಹಿಸ್ಸೆಗೆ ಬಂದ **2** ಎಕರೆ **27** ಗುಂಟೆ ಜಮೀನಿಗೆ ಒಂದೇ ಚಕ್ಕುಬಂದಿ ಕಾಣಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ.  ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ನನಗೆ ಸೇರಿದ ಜಮೀನು ಬರುತ್ತದೆ.  ಸದರಿ ಜಮೀನ ಸ.ನ.**4** ಆಗಿದ್ದು ಅದನ್ನು  ನಾನು ಕ್ರಯಕ್ಕೆ ಪಡೆದಿರುತ್ತೇನೆ. **1968** ರ ವಿಭಾಗ ಪತ್ರದ ಪ್ರಕಾರ ರಾಮಯ್ಯ ಮತ್ತು ಅವರ ಸಹೋದರರು ಯಾವ ಯಾವ ದಿಕ್ಕಿನಲ್ಲಿ ಯಾರು ಸ್ವಾಧೀನದಲ್ಲಿರುತ್ತಾರೆಂದು ನನಗೆ ಗೊತ್ತಿಲ್ಲ.  ದಾವಾ ಆಸ್ತಿಯನ್ನು ಬಿಟ್ಟು ಬೇರೆ ದಾವಾ ಸ.ನ ಗೆ ಸಂಬಂಧಿಸಿದಂತೆ ಯಾರು ಯಾರು ಸ್ವಾಧೀನದಲ್ಲಿರುತ್ತಾರೆಂದು ನನಗೆ ಗೊತ್ತಿಲ್ಲ. ರಾಮಯ್ಯರವರ ಭಾಗಕ್ಕೆ ಬಂದಿ **2** ಎಕರೆ **1** ಗುಂಟೆ ಮತ್ತು **19** ಗುಂಟೆ ಜಮೀನುಗಳು ಪ್ರತ್ಯೇಕವಾಗಿದ್ದು, ಆ ಪೈಕಿ **19** ಗುಂಟೆ ಜಮೀನನ್ನು ನನಗೆ ಮಾರಾಟ ಮಾಡಿರುತ್ತಾರೆ.  **19** ಗುಂಟೆ ಜಮೀನು ನಾನು ಕ್ರಯಕ್ಕೆ ಪಡೆಯುವ ಮೊದಲು ಸ.ನ. **5/1** ಆಗಿತ್ತು.  ದಾವಾ ಆಸ್ತಿ ಹಾಗೂ

ರಾಮಯ್ಯನಿಗೆ ಸೇರಿದ ಉಳಿಕೆ ಜಮೀನಿನ ನಡುವೆ ಜಯರಾಮಯ್ಯ ಮತ್ತು ಮುತ್ತುಆಂಜನಪ್ಪರವರ ಜಮೀನು ಬರುತ್ತದೆ.

**3.** ನಾನು ದಾವಾ ಆಸ್ತಿಯನ್ನು ಖರೀದಿ ಮಾಡುವಾಗ ದಾವಾ ಆಸ್ತಿಗೆಗೆ ಸಂಬಂಧಿಸಿದಂತೆ ಸರ್ವೆ ದಾಖಲೆಗಳು, ಪಹಣಿ ಪತ್ರಿಕೆಗಳನ್ನು ನೋಡಿರುತ್ತೇನೆ.

ಮುಂದುವರೆದ ಪಾಟೀಸವಾಲಿಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

OS 14/2021
PW -1

Plaintiff present, filed his affidavit in lieu of chief examination and examined as PW-1.

Sri. KBA prays time.

Further chief of PW 1 by: 24.03.2026.

OS 14/2021
PW -1

Civil Judge and JMFC.

*Koratagere.*